ಕರ್ನಾಟಕ ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ
ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

## ಉಪ ವಲಯ ಅರಣ್ಯಾಧಿಕಾರಿ ಮತ್ತು ಅರಣ್ಯ ರಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ

(ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-3/2012-13 ದಿನಾಂಕ 21-12-2012 ಮತ್ತು
ಅಧಿಸೂಚನೆ ಸಂಖ್ಯೆ: ಬಿ9-ನೇಮಕಾತಿ-ವಿವ-4/2012-13 ದಿನಾಂಕ 13-03-2013)

## ಪ್ರಕಟಣೆ

113 ಉಪ ವಲಯ ಅರಣ್ಯಾಧಿಕಾರಿ ಮತ್ತು 329 ಅರಣ್ಯ ರಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಕುರಿತು ದಿನಾಂಕ 23-03-2015 ರಿಂದ 26-03-2015 ರವರೆಗೆ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆ ಮಾಡಿ ಇವುಗಳನ್ನು ಇಲಾಖಾ ವಶ ಪಡೆಯಲಾಗಿದೆ ಮತ್ತು ವೈದ್ಯಕೀಯ ಪರೀಕ್ಷೆಗಳನ್ನು ನಿಗದಿತ ವೈದ್ಯಾಧಿಕಾರಿಗಳಿಂದ ನಡೆಸಲಾಗಿದೆ. ವಿವರ ಈ ಕೆಳಕಂಡಂತಿದೆ:-

ಉಪ ವಲಯ ಅರಣ್ಯಾಧಿಕಾರಿ ಬಿ.ಎಸ್‌ಸಿ. (ಫಾರೆಸ್ಟ್ರಿ) ಹುದ್ದೆಗೆ ಒಟ್ಟು 60 ಅಭ್ಯರ್ಥಿಗಳು ಹಾಜರಾಗಿದ್ದು, ಈ ಎಲ್ಲಾ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುತ್ತಾರೆ ಹಾಗೂ ಈ ಎಲ್ಲಾ ಅಭ್ಯರ್ಥಿಗಳು ನಿಗದಿತ ವೈದ್ಯಕೀಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಉಪ ವಲಯ ಅರಣ್ಯಾಧಿಕಾರಿ ಬಿ.ಎಸ್‌ಸಿ. ಹುದ್ದೆಗೆ ಒಟ್ಟು 56 ಅಭ್ಯರ್ಥಿಗಳು ಹಾಜರಾಗಿದ್ದು, ಈ ಎಲ್ಲಾ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುತ್ತಾರೆ ಹಾಗೂ ಈ ಎಲ್ಲಾ ಅಭ್ಯರ್ಥಿಗಳು ನಿಗದಿತ ವೈದ್ಯಕೀಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಶ್ರೀ ವಿನಾಯಕ ಪ್ರಸಾದ್ ಹೆಚ್.ಎನ್., ನೋಂದಣಿ ಸಂಖ್ಯೆ: 21060 ಇವರು ಗೈರುಹಾಜರಾಗಿರುತ್ತಾರೆ. ಈ ಅಭ್ಯರ್ಥಿಗೆ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಹಾಗೂ ವೈದ್ಯಕೀಯ ಪರೀಕ್ಷೆಗೆ ಹಾಜರಾಗಲು ಅಂತಿಮ ಅವಕಾಶವನ್ನು ನೀಡಲಾಗಿದೆ. ಈ ಅಭ್ಯರ್ಥಿಯು ದಿನಾಂಕ 27-04-2015 ರಂದು ಪೂರ್ವಾಹ್ನ 10.30 ಗಂಟೆಗೆ ಈ ಕೆಳಸಹಿದಾರರ ಎದುರು ತಮ್ಮ ಮೂಲ ದಾಖಲೆಗಳನ್ನು ಹಾಜರುಪಡಿಸಲು ತಿಳಿಸಿದೆ.

ಅರಣ್ಯ ರಕ್ಷಕ ಹುದ್ದೆಗೆ ಒಟ್ಟು 303 ಅಭ್ಯರ್ಥಿಗಳು ಹಾಜರಾಗಿದ್ದು, ಈ ಎಲ್ಲಾ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುತ್ತಾರೆ ಹಾಗೂ ಈ ಎಲ್ಲಾ ಅಭ್ಯರ್ಥಿಗಳು ನಿಗದಿತ ವೈದ್ಯಕೀಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಉಳಿದಂತೆ ಈ ಕೆಳಕಂಡ 8 ಅಭ್ಯರ್ಥಿಗಳು ಗೈರುಹಾಜರಾಗಿರುತ್ತಾರೆ. ವಿವರ ಈ ಕೆಳಕಂಡಂತಿದೆ:-

| ಕ್ರ ಸಂ | ನೋಂದಣಿ ಸಂಖ್ಯೆ | ಹೆಸರು ಶ್ರೀಯುತ: |
|---|---|---|
| 1 | 30218 | ಕೆಂಪರಾಜು ಕೆ. |
| 2 | 30574 | ಶಿವಾನಂದ ಕೊಪ್ಪದ್ |
| 3 | 31823 | ರಮೇಶ ಕೆ. |
| 4 | 32313 | ಅಶೋಕ |
| 5 | 32332 | ಭಾಗಣ್ಣ ವಾಲೀಕಾರ್ |
| 6 | 34855 | ರಾಕೇಶ್ ಎಸ್. |
| 7 | 35286 | ಪ್ರಶಾಂತ್ ಎಲ್. |
| 8 | 35346 | ರಾಜೇಶ್ ಕೆ. |

ಗೈರುಹಾಜರಾಗಿರುವ ಈ ಮೇಲ್ಕಂಡ 8 ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ಹಾಗೂ ವೈದ್ಯಕೀಯ ಪರೀಕ್ಷೆಗೆ ಹಾಜರಾಗಲು ಅಂತಿಮ ಅವಕಾಶವನ್ನು ನೀಡಲಾಗಿದೆ. ಈ ಅಭ್ಯರ್ಥಿಗಳು ದಿನಾಂಕ 27-04-2015 ರಂದು ಪೂರ್ವಾಹ್ನ 10.30 ಗಂಟೆಗೆ ಈ ಕೆಳಸಹಿದಾರರ ಎದುರು ತಮ್ಮ ಮೂಲ ದಾಖಲೆಗಳನ್ನು ಹಾಜರುಪಡಿಸಲು ತಿಳಿಸಿದೆ.

ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿ ವೈದ್ಯಕೀಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಇಬ್ಬರು ಅಭ್ಯರ್ಥಿಗಳು ಈ ಕಚೇರಿಗೆ ಲಿಖಿತ ರೂಪದಲ್ಲಿ ಮನವಿಯನ್ನು ಸಲ್ಲಿಸಿ, ಬೇರೆ ಇಲಾಖೆಯಲ್ಲಿ ಉದ್ಯೋಗ ದೊರಕಿರುವುದರಿಂದ, ಅರಣ್ಯ ರಕ್ಷಕ ಹುದ್ದೆಗೆ ಸೇರಲು ಇಚ್ಛೆ ಇಲ್ಲವೆಂದು ತಿಳಿಸಿ ಮೂಲ ದಾಖಲೆಗಳನ್ನು ಹಿಂದಕ್ಕೆ ಪಡೆದಿರುತ್ತಾರೆ.

| ಕ್ರ. ಸಂ | ನೋಂದಣಿ ಸಂಖ್ಯೆ | ಹೆಸರು ಶ್ರೀಯುತ: |
|---|---|---|
| 1 | 30257 | ಮಧು ಎ. |
| 2 | 31088 | ಮಾಯಪ್ಪ ರಾಯಪ್ಪ ಗಡ್ಡೆ |

ಶ್ರೀ ವಿಜಯ ಪಮ್ಮಾರ, ನೋಂದಣಿ ಸಂಖ್ಯೆ: 31442 ಇವರ ವೈದ್ಯಕೀಯ ಪರೀಕ್ಷೆಯ ಫಲಿತಾಂಶವು ಇನ್ನೂ ದೊರೆಯಬೇಕಾಗಿರುತ್ತದೆ. ವೈದ್ಯಕೀಯ ಪರೀಕ್ಷೆಯ ಫಲಿತಾಂಶದ ನಂತರ ಇವರ ಆಯ್ಕೆಯ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ ಮಾಹಿತಿಯನ್ನು ಅರಣ್ಯ ಇಲಾಖೆಯ website: www.aranya.gov.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.

ಬೆಂಗಳೂರು,
ದಿನಾಂಕ: 17-4-2015

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಹಾಗೂ ಆಯ್ಕೆ ಪ್ರಾಧಿಕಾರ.